# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ : ಜಂ ಆ (ಕಂ) / ಪಿಆರ್ / 3365 / 2011-12

ಆಯುಕ್ತರ ಕಛೇರಿ
ನಗರ ಪಾಲಿಕೆ ಕಛೇರಿಗಳು,
ಬೆಂಗಳೂರು, ದಿನಾಂಕ : 22-10-2016

## ಆಂತರಿಕ ಕಛೇರಿ ಟಿಪ್ಪಣಿ

ವಿಷಯ: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಸುಧಾರಣಾ ವೆಚ್ಚವನ್ನು ಸ್ವೀಕರಿಸುವ ಬಗ್ಗೆ.

ಉಲ್ಲೇಖ : 1. ಈ ಕಛೇರಿ ಸುತ್ತೋಲೆ ಸಂಖ್ಯೆ: ಉಆ (ಕಂ)ಪಿಆರ್/3365/2011-12, ದಿನಾಂಕ: 05-0-2013 ಮತ್ತು ದಿನಾಂಕ: 01-07-2014

2. ಕರ್ನಾಟಕ ಉಚ್ಛ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ: 56465/2014 ರ ದಿನಾಂಕ: 26-08-2016 ರ ಆದೇಶ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಭೂ ಪರಿವರ್ತನೆಗೊಂಡ ಏಕ ನಿವೇಶನಗಳಿಗೆ ಸುಧಾರಣಾ ವೆಚ್ಚವನ್ನು ಪಾವತಿಸಿಕೊಂಡು ಖಾತೆ ನೊಂದಾಯಿಸಲು ಕಾಯ್ದೆಯಲ್ಲಿ ಅವಕಾಶ ಕಲ್ಪಿಸಲಾಗಿರುತ್ತದೆ. ಸದರಿ ಕಾಯ್ದೆ ಅನ್ವಯ ನಿಯಮಗಳನ್ನು ರೂಪಿಸಲಾಗಿರುತ್ತದೆ. ಮುಂದುವರೆದಂತೆ, ಸುಧಾರಣಾ ವೆಚ್ಚವನ್ನು ನಿಗಧಿಪಡಿಸುವ ಸಂಬಂಧ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಟಿಪ್ಪಣಿ ಯನ್ನು ಮಂಡಿಸಲಾಗಿದ್ದು, ದಿನಾಂಕ: 28-1-2014 ಮತ್ತು 29-01-2014 ರ ನಗರ ಪಾಲಿಕೆಯ ನಿರ್ಣಯದಂತೆ ಸುಧಾರಣಾ ವೆಚ್ಚವನ್ನು ನಿಗಧಿಪಡಿಸಲಾಗಿರುತ್ತದೆ.

ಸದರಿ ನಿರ್ಣಯದಂತೆ ಸುಧಾರಣಾ ವೆಚ್ಚವನ್ನು ಪಾವತಿಸಿಕೊಳ್ಳಲು ದಿನಾಂಕ: 01-07-2014 ರಂದು ವಿವರವಾದ ಸುತ್ತೋಲೆಯನ್ನು ಹೊರಡಿಸಲಾಗಿರುತ್ತದೆ. ಸದರಿ ಸುತ್ತೋಲೆಯನ್ನು ಪ್ರಶ್ನಿಸಿ, ಹಲವಾರು ಅಭಿವೃದ್ಧಿದಾರರು / ತೆರಿಗೆದಾರರು ಹಾಗೂ ಅನುಭವದಾರರು ಉಚ್ಚ ನ್ಯಾಯಾಲಯದಲ್ಲಿ ದಾವೆ ದಾಖಲಾಗಿದ್ದು, ಸದರಿ ದಾವೆಗೆ ಸಂಬಂಧಿಸಿದಂತೆ ನ್ಯಾಯಾಲಯವು ವಿಚಾರಣೆ ಕೈಗೊಂಡು, ದಿನಾಂಕ: 01-07-2014 ರ ಸುತ್ತೋಲೆಗೆ ತಡೆಯಾಜ್ಞೆ ನೀಡಿರುತ್ತದೆ. ತತ್ಸಬಂಧ ನ್ಯಾಯಾಲಯವು ವಿಚಾರಣೆ ಕೈಗೊಂಡು ಸದರಿ ಸುತ್ತೋಲೆಯು ಸಮರ್ಥನೀಯವಾಗಿರುತ್ತದೆಂದು ದಿನಾಂಕ: 26-08-2016 ರಂದು ಅಂತಿಮ ತೀರ್ಪು ನೀಡಿರುತ್ತದೆ (ಪ್ರತಿ ಲಗತ್ತಿಸಿದೆ).

ಆದುದರಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿರುವ ವ್ಯವಸಾಯೇತರ ಉದ್ದೇಶಕ್ಕಾಗಿ ಭೂಪರಿವರ್ತನೆಗೊಂಡು ವಿಭಜನೆಗೊಳಗಾಗದ ಏಕ ನಿವೇಶನಗಳ ಸ್ವತ್ತುಗಳಿಗೆ ದಿನಾಂಕ: 01-07-2014 ಮತ್ತು 05-01-2013 ರ ಸುತ್ತೋಲೆಗಳಂತೆ ಸುಧಾರಣಾ ವೆಚ್ಚವನ್ನು ಸ್ವೀಕರಿಸಲು ಕ್ರಮಕೈಗೊಳ್ಳುವಂತೆ ಸೂಚಿಸಲಾಗಿದೆ. ಈಗಾಗಲೇ ಭಾಗಶಃ ಸುಧಾರಣಾ ವೆಚ್ಚವನ್ನು ಪಾವತಿಸಿರುವ ಪ್ರಕರಣಗಳಲ್ಲಿ ತಿಳುವಳಿಕೆ ಪತ್ರವನ್ನು ಜಾರಿ ಮಾಡಿ ವಸೂಲಾತಿಗೆ ಕ್ರಮ ಕೈಗೊಳ್ಳತಕ್ಕದ್ದು. ಮುಂದುವರೆದಂತೆ, ಒಂದು ವರ್ಷದ ಒಳಗಾಗಿ ಸುಧಾರಣಾ ವೆಚ್ಚವನ್ನು ಪಾವತಿಸದೇ ಇದ್ದಲ್ಲಿ ದಿನಾಂಕ: 05-1-2013 ರ ಸುತ್ತೋಲೆಯಂತೆ ಮಾಹೆಯಾನ ಶೇ.1.5 ರಷ್ಟು ಬಡ್ಡಿಯೊಂದಿಗೆ ಸುಧಾರಣಾ ವೆಚ್ಚವನ್ನು ಸಂಗ್ರಹಿಸತಕ್ಕದ್ದು.

ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರತಿಯನ್ನು:
ಪೂಜ್ಯ ಮಹಾಪೌರರ ಅವಗಾಹನೆಗೆ ತರಲು ಆಪ್ತಕಾರ್ಯದರ್ಶಿಗಳಿಗೆ ಕಳುಹಿಸಿದೆ
ಪೂಜ್ಯ ಉಪ ಮಹಾಪೌರರ ಅವಗಾಹನೆಗೆ ತರಲು ಆಪ್ತಕಾರ್ಯದರ್ಶಿಗಳಿಗೆ ಕಳುಹಿಸಿದೆ
ಅಧ್ಯಕ್ಷರು, ತೆರಿಗೆ ಮತ್ತು ಆರ್ಥಿಕ / ನಗರ ಯೋಜನೆ ಸ್ಥಾಯಿ ಸಮಿತಿ ರವರುಗಳ ಗಮನಕ್ಕೆ ಕಳುಹಿಸಿದೆ

ವಿಶೇಷ ಆಯುಕ್ತರು (ಹಣಕಾಸು) / (ಯೋಜನೆ) ರವರ ಮಾಹಿತಿಗಾಗಿ ಕಳುಹಿಸಿದೆ.
ಎಲ್ಲಾ ವಲಯ ಅಪರ / ಜಂಟಿ / ಉಪ ಆಯುಕ್ತರುಗಳ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ
ಹೆಚ್ಚುವರಿ ನಿರ್ದೇಶಕರು / ಜಂಟಿ ನಿರ್ದೇಶಕರು (ನಗರ ಯೋಜನೆ) ವಿಭಾಗ ರವರುಗಳಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸದೆ.
ವಲಯ ಸಹಾಯಕ ನಿರ್ದೇಶಕರುಗಳು (ನಗರ ಯೋಜನೆ) ರವರ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
ಎಲ್ಲಾ ಕಂದಾಯ / ಸಹಾಯಕ ಕಂದಾಯ ಅಧಿಕಾರಿಗಳಿಗೆ ಕಳುಹಿಸಿಕೊಡುತ್ತಾ, ಮೇಲಿನ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸಲು ತಿಳಿಸಲಾಗಿದೆ.
ಸಾರ್ವಜನಿಕ ಸಂಪರ್ಕ ಅಧಿಕಾರಿಗಳಿಗೆ ಕಳುಹಿಸಿಕೊಡುತ್ತಾ, ಮೇಲ್ಕಂಡ ಟಿಪ್ಪಣಿ ಯನ್ನು ಕಛೇರಿ ನಾಮಫಲಕದಲ್ಲಿ ಅಳವಡಿಸಲು ಸೂಚಿಸಿದೆ.
ಮಾಹಿತಿ ತಂತ್ರಜ್ಞಾನ ಸಲಹೆಗಾರರಿಗೆ ಕಳುಹಿಸಿಕೊಡುತ್ತಾ, ಸದರಿ ಟಿಪ್ಪಣಿ ಯನ್ನು ಪಾಲಿಕೆಯ ಅಂತರ್ಜಾಲದಲ್ಲಿ ಪ್ರಕಟಿಸಲು ಸೂಚಿಸಿದೆ.